
SERVICE ABOVE SELF



2025-26

Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –05 ದಿನಾಂಕ : 30–07–2025


## ದಿನಾಂಕ: 30.07.2025ರ ವಾರದ ಸಭೆ

**2025–26 ನೇ ಸಾಲಿನ ಐದನೇ ಸಭೆ**

ವೈದ್ಯರುಗಳ ದಿನಾಚರಣೆ ಮತ್ತು ಚಾರ್ಟರ್ಡ್ಅಕೌಂಟೆಂಟ್ ದಿನಾಚರಣೆ ಪ್ರಯುಕ್ತ ಕಾರ್ಯಕ್ರಮ. ನಮ್ಮ ಕ್ಲಬ್‌ನ ವೈದ್ಯರುಗಳ ಹಾಗೂ ಲೆಕ್ಕ ಪರಿಶೋಧಕರುಗಳನ್ನು ಅಭಿನಂದಿಸುವ ಕಾರ್ಯಕ್ರಮ.

ಅಂದು ಕಾರ್ಯದರ್ಶಿ ಅಧ್ಯಕ್ಷರಿಗೆ ಕಾಲರ್ ತೊಡಿಸಿದರು. ಮುಖ್ಯ ಅತಿಥಿಗಳಾಗಿ ನಮ್ಮವರೇ ಆದ ರೊ.ಪಿಡಿಜಿ. ಡಾ. ಆರ್.ಡಿ. ಪ್ರಭುರವರು ಭಾಗವಹಿಸಿದ್ದು, ವೇದಿಕೆಯಲ್ಲಿ ಅವರೊಂದಿಗೆ ಅಧ್ಯಕ್ಷರಾದ ರೊ. ಆನಂದ್ ಆರ್. ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರಿದ್ದರು.







ಅಂದಿನ ಸಭೆಯು ಕು.ಪರಿಪೂರ್ಣ ಭಟ್‌ರವರ ಗಣಪತಿಯ ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಸಭೆಯು ಚಾಲನೆಯಾಯಿತು. ಮಾಜಿ ಅಧ್ಯಕ್ಷ ರೊ.ಎನ್.ವಿ.ಭಟ್‌ರವರಿಂದ ಸ್ವಾಗತ. ನಿಕಟ ಪೂರ್ವ ಅಧ್ಯಕ್ಷರಾದ ರೊ.ಕೆ.ಸೂರ್ಯನಾರಾಯಣ ಉಡುಪರವರಿಂದ ರೋಟರಿ ಮಾಹಿತಿ. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರಿಂದ ಪ್ರಕಟಣೆಗಳು ಹಾಗೂ ರೋಟರಿ ಬಂಧುಗಳ ವಿವಾಹ ವಾರ್ಷಿಕೋತ್ಸವದ ಪ್ರಕಟಣೆಗಳು ಮತ್ತು ಅಭಿನಂದನೆ. ಈ ಕೆಳಕಂಡ ನಮ್ಮ ರೋಟರಿ ಬಂಧುಗಳು ವೇದಿಕೆಗೆ ಆಗಮಿಸಿ, ನೆನಪಿನ ಕಾಣಿಕೆ ಹಾಗೂ ವಿವಾಹ ವಾರ್ಷಿಕೋತ್ಸವದ ಅಭಿನಂದನೆಗಳನ್ನು ಸ್ವೀಕರಿಸಿದರು.

- ರೊ. ಕಿಶೋರ್ ಶೀರನಾಳಿ ಮತ್ತು ರೊ. ಅನುರಾಧಾ ಶೀರನಾಳಿ
- ರೊ. ಆನಂದಕುಮಾರ್
- ರೊ. ವಿಜಯಕುಮಾರ್ ಸಿ. ಮತ್ತುಗೌರಿ
- ರೊ. ನಿರ್ಮಲಾ ಶಿವಾನಂದ್ ಮತ್ತು ಶ್ರೀ ಶಿವಾನಂದ್

ಇದೇ ಸಂದರ್ಭದಲ್ಲಿ ರೊ.ಪಿಡಿಜಿ ಡಾ.ಆರ್.ಡಿ. ಪ್ರಭುರವರು ತಿಳಿಸಿದ ಮೇರೆಗೆ ನಮ್ಮ ಕ್ಲಬ್‌ನ ಮಾಜಿ ಸದಸ್ಯರಾದ ಜನಪ್ರಿಯರೂ ಆಗಿದ್ದಂತಹ ರೊ.ಡಾ.ವಾಸುದೇವ ಕಾಮತ್‌ರವರು ನಿಧನರಾಗಿದ್ದಾರೆ. ಮೃತರ ಆತ್ಮಕ್ಕೆ ಒಂದು ನಿಮಿಷದ ಮೌನವಾಚರಿಸಿ ಗೌರವ ಸೂಚಿಸಲಾಯಿತು. ರೊ. ಹೆಚ್. ಎಸ್. ರಘುರಾಂ ಭಟ್‌ಇವರು ತಿಳಿಸಿದ ಮೇರೆಗೆ ಖ್ಯಾತ ಚಾರ್ಟರ್ಡ್ ಅಕೌಂಟೆಂಟ್ ಹಲವಾರು ಹಗರಣಗಳನ್ನು (ಸತ್ಯಂ ಕಂಪ್ಯೂಟರ್ಸ್) ಬಯಲಿಗೆಳೆದ ಶ್ರೀ ಟಿ.ಎನ್ ಮನೋಹರ್‌ರವರು ಅಂದೇ ನಿಧನರಾದ ಮಾಹಿತಿ ನೀಡಿದರು.

ಅಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರೊ.ಪಿಡಿಜಿ ಡಾ.ಆರ್.ಡಿ. ಪ್ರಭುರವರು ಮಾತನಾಡಿ, ವೈದ್ಯರುಗಳ ದಿನಾಚರಣೆ ಬಗ್ಗೆ ಮಾತನಾಡುತ್ತಾ, ಇದೊಂದು ಮಹತ್ವದ, ಸಂಭ್ರಮಿಸುವ ದಿನವೆನಿಸಿದೆ. ಈ ಆಚರಣೆ ಪಶ್ಚಿಮದಿಂದ ಬಂದಿದೆ. ಇಡೀ ವರ್ಷವೂ ಮುಖ್ಯ. ನಮ್ಮ ಜೀವನದಲ್ಲಿ ಇಡೀ ವರ್ಷವೂ ವೈದ್ಯರುಗಳ ದಿನ. ಇದನ್ನು ಡಾ.ಬಿ.ಸಿ.ರಾಯ್ (ಬಿಪಿನ್ ಚಂದ್ರರಾಯ್) ರವರ ಸ್ಮರಣಾರ್ಥ

## ಈ ವಾರದ ಸಭೆ

**ದಿನಾಂಕ :06–08–2025 ಬುಧವಾರ** **ಸಂಜೆ 6:45**

**ಸದಸ್ಯತ್ವ ಅಭಿವೃದ್ಧಿ ಮಾಸಾಚರಣೆ ಪ್ರಯುಕ್ತ**

**ಅತಿಥಿ: ರೊ. ಕೆ. ಬಿ. ಪ್ರಸನ್ನ**

ಡಿಸ್ಟ್ರಿಕ್ ಮೆಂಬರ್‌ಶಿಪ್ ಡೆವಲಪ್ ಕಮಿಟಿ ಛೇರ್‌ಮೆನ್

**ವಿಷಯ: ಸದಸ್ಯತ್ವ ಅಭಿವೃದ್ಧಿ**

**ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.**

**ಸ್ಥಳ: ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ





















ಆಚರಿಸಲಾಗುತ್ತಿದ್ದು, ಅವರು ಒಬ್ಬ ಐಡಿಯಲ್ ಡಾಕ್ಟರ್, ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಯಾಗಿ ತುಂಬಾ ಹೆಸರು ಮಾಡಿದವರು. ರಾಜಕಾರಣಿಯಾಗಿ ಉತ್ತಮ ಆಡಳಿತವನ್ನು ನೀಡಿದವರು. ಬಡವರ ಡಾಕ್ಟರ್ (ಶಿವಮೊಗ್ಗೆಯಲ್ಲಿ ಡಾ.ಮಲ್ನಾಡ್ ಕೃಷ್ಣಮೂರ್ತಿಯವರಂತೆ) ಎಂದೇ ಜನಪ್ರಿಯರಾದವರು. ಮುಖ್ಯ ಮಂತ್ರಿ ಹುದ್ದೆಯ ಕಾರ್ಯಭಾರದ ಜೊತೆಗೆ ಬಡವರಿಗಾಗಿ ವೈದ್ಯರ ಕಾರ್ಯ ನಿರ್ವಹಿಸಿದವರು. ಅವರ ನೆನಪಿಗಾಗಿ 1 ನೇ ಜುಲೈನ್ನು ವೈದ್ಯರುಗಳ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದರು.

ಡಾ. ಬಿ.ಸಿ.ರಾಯ್‌ರವರು ಭಾರತ ದೇಶದ ಅತ್ಯುನ್ನತ ಗೌರವವಾದ "ಭಾರತರತ್ನ" ಪಡೆದಿರುವುದನ್ನು ನೋಡಿದರೆ ಅವರು ಎಂಥಹ ಮಹಾನ್ ವ್ಯಕ್ತಿ ಎಂದು ಅರಿವಾಗುತ್ತದೆ. ಮುಖ್ಯ ಮಂತ್ರಿಗಳಾಗಿದ್ದರೂ ವೈದ್ಯ ವೃತ್ತಿ ಮಾಡಿದ್ದಾರೆ. ಬಡವರಿಗಾಗಿ ತನ್ನ ಕೆಲಸ ಬಿಟ್ಟಿಲ್ಲ. ಆದ್ದರಿಂದಲೇ ಅವರು ಮಹಾನ್ ವ್ಯಕ್ತಿ ಎನಿಸಿದ್ದಾರೆ. ಐ.ಎಂ.ಎ. ಗೂ ಕೂಡ ಕೆಲಸ ಮಾಡಿದ್ದಾರೆ. ತುಂಬಾ ಒಳ್ಳೆಯ ವ್ಯಕ್ತಿಯಾಗಿದ್ದು ಮದುವೆಯಾಗಿರಲಿಲ್ಲ ಎಂದರು.

ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ದಿ.ಡಾ. ಅಶೋಕ್ ಪೈರವರಿಗೂ ಬಿ.ಸಿ.ರಾಯ್ ಅವಾರ್ಡ್ ದೊರೆತಿದೆ ಎಂದು ರೊ.ಎ. ಮಂಜುನಾಥರವರು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ನಮ್ಮ ಕ್ಲಬ್‌ನ ಹಿರಿಯ ಸದಸ್ಯರಾದ ರೊ.ಡಾ. ಹೆಚ್.ಟಿ. ನಿರ್ಮಲಾರವರಿಗೆ ಅವರ ಬಳಗದವರಿಂದ ಬಹು ದೊಡ್ಡ ಪ್ರಮಾಣದಲ್ಲಿ ಸನ್ಮಾನಿಸಲ್ಪಟ್ಟಿದ್ದು, ನಮ್ಮ ಕ್ಲಬ್‌ನ ವತಿಯಿಂದ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ರೊ.ಡಾ. ಮೈಥಿಲಿ, ರೊ.ಭಾರ್ಗವಿ ಭಟ್ ಮತ್ತು ರೊ.ಡಾ, ಉಷಾ ಪ್ರಭುರವರು, ಅಧ್ಯಕ್ಷರು, ಕಾರ್ಯದರ್ಶಿ, ಮುಖ್ಯ ಅತಿಥಿಗಳು ಸೇರಿ ಡಾ. ನಿರ್ಮಲಾರವರನ್ನು ಸನ್ಮಾನಿಸಿದರು. ರೊ.ಡಾ. ಮೈಥಿಲಿಯವರು ಅವರನ್ನು ಮತ್ತು ಅವರ ಸಾಧನೆಗಳನ್ನು ಸಭೆಗೆ ಪರಿಚಯಿಸಿದರು. ರೊ.ಡಾ. ನಿರ್ಮಲಾರವರು ಮಾತನಾಡಿ, ಸನ್ಮಾನ ಇಷ್ಟವಿರಲಿಲ್ಲ. ಮಗಳ ಪ್ರಯತ್ನದಿಂದ ಆಯಿತು. ಮಕ್ಕಳ ಬಂಧುಗಳ ಒತ್ತಾಯದ ಮೇರೆಗೆ ಸಮಾರಂಭವಾಗಿದೆ ಎಂದು ತಿಳಿಸಿ ಅಂದು ಆಗಮಿಸಿದ್ದ ರೋಟರಿ ಬಂಧುಗಳಿಗೆಲ್ಲಾ ವಂದಿಸಿದರು.

ನಂತರ ಈ ಕೆಳಕಂಡಂತೆ ಲೆಕ್ಕ ಪರಿಶೋಧಕರ ದಿನಾಚರಣೆ ಪ್ರಯುಕ್ತ ನಮ್ಮ ಕ್ಲಬ್‌ನ ಚಾರ್ಟರ್ಡ್ ಅಕೌಂಟೆಂಟ್ ರೊ.ಹೆಚ್.ಎಸ್. ರಘುರಾಮ್ ಭಟ್‌ರವರನ್ನು ಸನ್ಮಾನಿಸಲಾಯಿತು. ವೈದ್ಯರುಗಳ ದಿನಾಚರಣೆ ಪ್ರಯುಕ್ತ ನಮ್ಮ ಕ್ಲಬ್‌ನ ವೈದ್ಯರುಗಳನ್ನು ಸನ್ಮಾನಿಸಲಾಯಿತು. ನಮ್ಮ ಕ್ಲಬ್‌ನ ವೈದ್ಯ ಸದಸ್ಯರುಗಳಾದ ರೊ.ಡಾ. ಗಿರೀಶ್, ರೊ.ಡಾ. ಮೈಥಿಲಿ, ರೊ.ಡಾ. ಹೆಚ್.ಸಿ. ಶಿವಕುಮಾರ್ (ಹೆಚ್.ಪಿ.ಸಿ.) ರೊ. ಪಿಡಿಜಿ. ಡಾ.ಆರ್.ಡಿ. ಪ್ರಭು, ರೊ.ಡಾ. ಹೆಚ್.ಟಿ. ನಿರ್ಮಲಾ ರೊ.ಡಾ. ಉಷಾ ಪ್ರಭು, ರೊ.ಡಾ.ಎಂ.ಸಿ. ಶಿವಕುಮಾರ್, ರೊ.ಡಾ. ಯತೀಷ್ ಇವರುಗಳನ್ನು ರೊ. ಹೆಚ್.ಎಸ್. ಮೋಹನ್, ರೊ.ಎಸ್.ದತ್ತಾತ್ರಿ, ರೊ. ವೈ.ವೆಂಕಟರಮಣ ಜೋಯ್ಸ್, ರೊ.ವೈ.ಜಿ.ಗುಪ್ತ, ರೊ.ಎನ್.ಎಸ್. ಶ್ರೀಧರ್, ರೊ.ಅನುರಾಧಾ ಶೀರ್ನಾಳಿ ಮುಂತಾದವರುಗಳು ಸೇರಿ ಅಭಿನಂದಿಸಿದರು.

ಅಧ್ಯಕ್ಷರಾದ ರೊ.ಆರ್.ಆನಂದರವರು ಮಾತನಾಡಿ, ನಮ್ಮ ಕ್ಲಬ್‌ನ ವತಿಯಿಂದ ರೋಟರಿ ಯುವಕೇಂದ್ರದಲ್ಲಿ ಕಂಪಾನಿಯೋ ಇವರ ಸಹಯೋಗದೊಂದಿಗೆ, ಉಚಿತ ಫೂಟ್ ಪಲ್ಸ್‌ಥೆರಪಿ ಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ರೋಟರಿ ಬಂಧುಗಳು ಇದರ ಸದುಪಯೋಗ ಪಡೆಯಲು ಕೋರಿದೆ. ಇದು ವೈದ್ಯಕೀಯ ಪ್ರಮಾಣಿತ ತಂತ್ರಜ್ಞಾನದಿಂದ ಭಾರತ ಸರ್ಕಾರ ಮೇಕ್ ಇನ್ ಇಂಡಿಯಾ ಕಾರ್ಯಕ್ರಮದಡಿಯಲ್ಲಿ ತಯಾರಿಸಿದ ಥೆರಪಿ ಉಪಕರಣಗಳನ್ನು ಬಳಸಿ ಸುಮಾರು 30 ಲಕ್ಷಕ್ಕೂ ಅಧಿಕ ಜನರು ಪರಿಹಾರ ಕಂಡುಕೊಂಡಿದ್ದಾರೆ. ರೋಟರಿ ಬಂಧುಗಳೂ ಇದರ ಉಪಯೋಗ ಪಡೆಯಿರಿ ಎಂದರು.

ಕೊನೆಯಲ್ಲಿ ರೊ.ಲಕ್ಷ್ಮೀನಾರಾಯಣ ಭಟ್‌ರವರಿಂದ ವಂದನಾರ್ಪಣೆಯನ್ನು ಮಾಡಿದರು.

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**

## ಉಚಿತ ಫೂಟ್ ಪಲ್ಸ್ ಥೆರಪಿ ಚಿಕಿತ್ಸಾ ಶಿಬಿರ





ದಿನಾಂಕ: 01–08–2025 ರಂದು ರೋಟರಿ ಕ್ಲಬ್ ಶಿವಮೊಗ್ಗ ಮತ್ತು ಕಂಪಾನಿಯೋ ಸಂಸ್ಥೆ ಇವರ ವತಿಯಿಂದ ಜಂಟಿಯಾಗಿ ಉಚಿತ ಫೂಟ್ ಪಲ್ಸ್ ಥೆರಪಿ ಚಿಕಿತ್ಸಾ ಶಿಬಿರ ಆಯೋಜನೆಗೊಂಡಿತ್ತು. ಕ್ಲಬ್‌ನ ಸದಸ್ಯರು ಮತ್ತು ಕುಟುಂಬ ವರ್ಗದವರು ಶಿಬಿರದಲ್ಲಿ ಭಾಗವಹಿಸಿ ಇದರ ಪ್ರಯೋಜವನ್ನು ಪಡೆದರು.


**Rotary Information as on 30.06.2025 ( 01.07.2025)**

**Membership : District : 3532**

| | |
|---|---|
| **Zone 3** | **: 439** |
| **Zone 10** | **: 433** |
| **Zone 1** | **: 396** |
| **Club:** | |
| **Karkala** | **: 125** |
| **Shimoga** | **: 115** |
| **ShimogaMid Town** | **: 105** |

**TRF : District : 1,74,595.99 $**

| | |
|---|---|
| **Zone 10** | **: 46456.65 $** |
| **Zone 3** | **: 35182.56 $** |
| **Zone 4** | **: 18058.19 $** |
| **Club:** | |
| **Shimoga Mid Town:** | **23869.88 $** |
| **Shimoga** | **: 18545.22 $** |
| **Udupi Mid Town** | **: 16563.34 $** |




**Contd, from Last week bulletin....**

**FROM ROTARY NEWS -**

**METICULOUS PLANNING BEHIND A MAGICAL PROJECT – DG Mahaveera Bothra – written by Rasheeda Bhagat in Rotary News**

On the genesis of the idea, in a leisurely chat at our office, Bothra recalled that when he had organized his PETS in Malaysia before his team, “I had no particular product planned for my year, but suddenly, on the last day of PETS, I simply announced we are going to do a special projects for TirupatiDarshan for over 1000 special children. I made the announcement but I did not have either influence at the Devasthanam or a definite plan of how I would do it.”

When he returned home from Malaysia, the announcement kept playing in his head and he asked his ICICI Bank Manager if he knew any senior officials in the Tirumala Devasthanam, and he said one of his account holders was a trustee there. He asked for a letter detailing Bothra’s plan. “ I gave him a letter explaining about Rotary.

For a month, there was no response and just as he was getting ready to personally visit this trustee, he got a reply giving special permission for darshan on a particular day at a special time. The thrilled DG thought the cost would be within Rs.10 lakh; the return ticket would be around Rs.500 and food for children would be free as he could easily get some sponsorships in place. He was even prepared to go up to Rs.15 lakh

He quickly put together a five member committee with each member committee with each member contributing Rs.1.5 lakh; The Rotarians gave a letter to the Southern Railways GM seeking a train to take the children to the Ranigunta Station. They could take a special train for them.


When the Rotarians said they were ready, they were told that each coach would cost Rs. 1 lakh an as they had 1600 passangers, they would have to hire 16 coaches and a pantry car. That cost alone blew the entire budget 15 lakhs.

Apart from this cost, the Railway rules, they would have to pay a deposit of Rs.10.5 lakhs which would return only six months after the event. Of course additional cost on water, snacks, cleaning etc would have to be borne by them.

He can now smile, but at that time he was an extremely worried man. We were wondering where the money would come from because of the cost of train itself, along with the deposit, was RS. 27 lakh. We asked the Tirumala depot for free buses to transport the children from Ranigunta station to Tirumala, but they said we cannot give you free buses from Ranigunta; our buses go only from Tirupati to Tirumala. You would better contact IRCTC for buses. We did and were told each bus would cost Rs.40000.00 The cost came above Rs.12 lakh, and an additional Rs.4 lakh was needed as caution deposit”.

By now the cost had spiralled to Rs.50 lakh or half a crore only for the basic transport train and bus from the Chennai Railway station to Tirumala. Bothra quickly expanded his five member committee to 15 member committee, and sought Rs.1.5 lakh from each member. He thus got Rs.25 lakh to cover the train cost including the deposit.

(Contd.,)





## ಸಂಪಾದಕೀಯ

### 19 ಒಂಟೆಗಳ ಕಥೆ...

ಒಂದು ಹಳ್ಳಿಯಲ್ಲಿ ಒಬ್ಬ ವ್ಯಕ್ತಿ 19 ಒಂಟೆಗಳನ್ನು ಹೊಂದಿದ್ದನು. ಒಂದು ದಿನ ಅವನು ಅಸುನೀಗಿದನು. ಆತನ ಮರಣದ ಅನಂತರ ಅವನು ಬರೆದಿದ್ದ ಉಯಿಲನ್ನು ಊರಿನ ಪಂಚಾಯ್ತಿಯಲ್ಲಿ ಓದಲಾಯಿತು. ಅದರಲ್ಲಿ ಹೀಗಿತ್ತು :

ನನ್ನ ಬಳಿಯಲ್ಲಿ 19 ಒಂಟೆಗಳಿವೆ, ಅವುಗಳಲ್ಲಿ ಅರ್ಧದಷ್ಟು ಒಂಟೆಗಳನ್ನು ನನ್ನ ಮಗನಿಗೆ ನೀಡಬೇಕು, 19 ಒಂಟೆಗಳಲ್ಲಿ ನಾಲ್ಕನೇ ಒಂದು ಭಾಗವನ್ನು ನನ್ನ ಮಗಳಿಗೆ ನೀಡಬೇಕು. 19 ಒಂಟೆಗಳಲ್ಲಿ ಐದನೇ ಒಂದು ಭಾಗವನ್ನು ನನ್ನ ಸೇವಕನಿಗೆ ನೀಡಬೇಕು ಎಂದಿತ್ತು

ಈ ವಿಭಜನೆ ಹೇಗೆ ಆಗಬೇಕು!? ಎಲ್ಲರೂ ಗೊಂದಲಕ್ಕೊಳಗಾಗಿದ್ದರು. 19 ಒಂಟೆಗಳಲ್ಲಿ ಅರ್ಧದಷ್ಟು ಅಂದರೆ 9.5 ರಷ್ಟು ಮಗನಿಗೆ ನೀಡಬೇಕು. ಅಂದರೆ ಒಂದು ಒಂಟೆಯನ್ನು ಕತ್ತರಿಸಬೇಕಾಗುತ್ತದೆ. 19 ಒಂಟೆಗಳಲ್ಲಿ ನಾಲ್ಕನೇ ಒಂದು ಭಾಗ ಅಂದರೆ 4.75 ಒಂಟೆಗಳನ್ನು ಮಗಳಿಗೆ ಕೊಡಬೇಕು. ಅಂದರೆ ಮತ್ತೊಂದು ಒಂಟೆಯನ್ನು ಕತ್ತರಿಸಬೇಕಾಗುತ್ತದೆ. 19 ಒಂಟೆಗಳಲ್ಲಿ ಐದನೇ ಒಂದು ಭಾಗ ಅಂದರೆ 3.80 ರಷ್ಟು ಒಂಟೆಗಳನ್ನು ಸೇವಕನಿಗೆ ನೀಡಬೇಕು. ಅಂದರೆ ಮಗದೊಂದು ಒಂಟೆಯನ್ನು ಕತ್ತರಿಸಬೇಕಾಗುತ್ತದೆ !!

ಎಲ್ಲರೂ ತುಂಬಾ ಗೊಂದಲದಲ್ಲಿದ್ದರು. ಆಗ ಪಕ್ಕದ ಹಳ್ಳಿಯಿಂದ ಒಬ್ಬ ಬುದ್ಧಿವಂತನನ್ನು ಕರೆಸಲಾಯಿತು. ಆ ಬುದ್ಧಿವಂತ ತನ್ನ ಒಂಟೆಯ ಮೇಲೆ ಸವಾರಿ ಮಾಡಿಕೊಂಡು ಬಂದು, ಸಮಸ್ಯೆಯನ್ನು ಆಲಿಸಿದ. ತನ್ನ ಮನಸ್ಸಿನಲ್ಲೇ ಲೆಕ್ಕಾಚಾರ ಮಾಡಿಕೊಂಡು ಅನಂತರ, ಈ 19 ಒಂಟೆಗಳ ನಡುವೆ ನನ್ನ ಒಂಟೆಯನ್ನು ಸೇರಿಸಿ ಹಂಚಿರಿ ಎಂದನು.

ಎಲ್ಲರೂ ಇಲ್ಲೊಬ್ಬ ವಿಚಿತ್ರ ವ್ಯಕ್ತಿ ಬಂದಿದ್ದಾನೆ. ತನ್ನ ಒಂಟೆಯನ್ನು ಇವರ ನಡುವೆ ಹಂಚಬೇಕು ಎಂದು ಹೇಳುವ ಇವನೊಬ್ಬ ಹುಚ್ಚ ಎಂದು ಭಾವಿಸಿದರು. ಆದರೂ ವಿಷಯವನ್ನು ಒಪ್ಪಿಕೊಳ್ಳುವುದರಿಂದ ಏನು ತೊಂದರೆ ಎಂದು ಎಲ್ಲರೂ ಯೋಚಿಸಿದರು.

ಈಗ 19+1=20 ಒಂಟೆಗಳಾದವು !!

20 ರಲ್ಲಿ ಅರ್ಧದಷ್ಟು ಅಂದರೆ 10 ಒಂಟೆಗಳನ್ನು ಮಗನಿಗೆ, ನಾಲ್ಕನೇ ಒಂದು ಭಾಗ 5 ಒಂಟೆಗಳನ್ನು ಮಗಳಿಗೆ ಮತ್ತು ಐದನೇ ಒಂದು ಭಾಗ ಅಂದರೆ 4 ಒಂಟೆಗಳನ್ನು ಸೇವಕನಿಗೆ ಉಯಿಲಿನಂತೆ ನೀಡಿದರು. ಅಲ್ಲಿಗೆ 10+5+4=19 ಒಂಟೆಗಳಾದವು. ಅಲ್ಲಿ ಈಗ ಒಂದು ಒಂಟೆ ಉಳಿದಿದೆ. ಅದು ಆ ಬುದ್ಧಿವಂತ ವ್ಯಕ್ತಿಗೆ ಸೇರಿದ್ದು. ಅವನು ಅದನ್ನು ಹತ್ತಿಕೊಂಡು ತನ್ನ ಹಳ್ಳಿಗೆ ಹಿಂತಿರುಗಿದ.

ಹೀಗೆ 1 ಒಂಟೆಯನ್ನು 19 ಒಂಟೆಗಳ ಜೊತೆಯಲ್ಲಿ ಸೇರಿಸಿ ಯಾವುದೇ ಒಂಟೆಯನ್ನು ಕತ್ತರಿಸದೇ ಮರಣ ಹೊಂದಿದ ಆ ವ್ಯಕ್ತಿಯ ಉಯಿಲಿನಲ್ಲಿರುವಂತೆಯೇ ಹಂಚಲಾಯಿತು. ಅಂತೆಯೇ ನಮ್ಮೆಲ್ಲರ ಜೀವನದಲ್ಲಿ 19 ಒಂಟೆಗಳಿವೆ.

**5 ಪಂಚೇಂದ್ರಿಯಗಳು** (ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ)
**5 ಕರ್ಮೇಂದ್ರಿಯಗಳು** (ಕೈ, ಕಾಲು, ನಾಲಿಗೆ, ಮೂತ್ರನಾಳ, ಗುದದ್ವಾರ)
**5 ಆತ್ಮಗಳು** (ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನ)
**4 ಆತ್ಮ ಸಾಕ್ಷಿಗಳು** (ಮನಸ್ಸು, ಬುದ್ಧಿ, ಚಿತ್ತ, ಅಹಂಕಾರ)

**ಹೀಗೆ ಒಟ್ಟು 19 ಒಂಟೆಗಳಿವೆ.**

**ಮನುಷ್ಯ ತನ್ನ ಜೀವನದುದ್ದಕ್ಕೂ ಈ 19 ಒಂಟೆಗಳ ವಿತರಣೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ ಮತ್ತು ಅದಕ್ಕೆ 1 ಬಂಧು-ಮಿತ್ರರು ಎಂಬ ಒಂಟೆಯನ್ನು ಸೇರಿಸದ ಹೊರತು ಜೀವನ ನಡೆಸಲಾಗುವುದಿಲ್ಲ. ಸುಖ, ಶಾಂತಿ, ಸಂತೃಪ್ತಿ, ಆನಂದ ಸಿಗುವುದಿಲ್ಲ.**

**ಜೀವನದಲ್ಲಿ ಸಂತೋಷದಿಂದ ಇರಲು ಬಂಧು-ಮಿತ್ರರ ಪ್ರೀತಿ-ವಿಶ್ವಾಸಗಳು ಅಗತ್ಯ.**

• ರೊ. ಎಂ. ಮಾಧವಾಚಾರ್










ದಿನಾಂಕ: 30-07-2025ರಂದು ಜಾವಳ್ಳಿಯ ಜ್ಞಾನದೀಪ ಪ್ರೌಢಶಾಲೆಯಲ್ಲಿ ರೋಟರಿ ಇಂಟರ್‍ಯಾಕ್ಟ್ ಕ್ಲಬ್‌ನ್ನು ಅಧ್ಯಕ್ಷರಾದ ರೊ. ಆನಂದ್ ಆರ್.ರವರು ಉದ್ಘಾಟಿಸಿದರು. ಕಾರ್ಯದರ್ಶಿ ರೊ. ವಿಶ್ವಾಸ್ ವೈ ಮತ್ತು ರೊ. ಸೂರ್ಯನಾರಾಯಣ ಉಡುಪ, ರೊ. ಎನ್.ಜಿ. ಉಷಾ, ರೊ. ನಾಗಪತಿ ವಿ. ಭಟ್. ರೊ. ವೀರಣ್ಣ ಎ. ಹುಗ್ಗಿಯವರು ಉಪಸ್ಥಿತರಿದ್ದರು. ಶಾಲೆಯ ಮುಖ್ಯೋಪಾಧ್ಯಾಯರು ಸೇರಿದಂತೆ, ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕಿಯರು ಭಾಗವಹಿಸಿದ್ದರು.

## *Happy Birthday*



Ananda Kumar A
4th August



Kalamrutha
5th August



Sharada Gopal
06th August



Pramoda Sastry
06th August

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495